ಎ) ಶಿಗ್ಗಾಂವ್‌ಗೆ ಕೆ.ಎಸ್.ಆರ್.ಪಿ ಬಟ್ಟಾಲಿಯನ್ ಮಂಜೂರು

ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್) : ಮಾನ್ಯ ಅಧ್ಯಕ್ಷರೇ, ಶಿಗ್ಗಾಂವ್ ಪಟ್ಟಣಕ್ಕೆ 10ನೇ ಕೆಎಸ್‌ಆರ್‌ಪಿ ಬಟಾಲಿಯನ್ 14-9-1993 ರಂದು ಮಂಜೂರಾಗಿದೆ. ಸದರಿ ಬಟಾಲಿಯನ್ ಪ್ರಾರಂಭ ಮಾಡುವಲ್ಲಿ ಸಾಕಷ್ಟು ವಿಳಂಬವಾಗಿದ್ದು 97ಎಕರೆ 29ಗುಂಟೆ ಜಮೀನನ್ನು ಕೂಡ ಕಬ್ಜಾ ತೆಗೆದುಕೊಳ್ಳಲಾಗಿದೆ. ಈ ಬಗ್ಗೆ ಮಾನ್ಯ ಸಚಿವರು ದಿನಾಂಕ :18-2-97ರಂದು ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟ ಕೂಡಲೇ ಪ್ರಾರಂಭ ಮಾಡುತ್ತೇವೆ ಎಂಬ ಉತ್ತರವನ್ನೂ ಕೂಡ ಕೊಟ್ಟಿದ್ದಾರೆ. ಹೀಗಿರುವಾಗ ಡಿಜಿಪಿ ಯವರು ಇದನ್ನು ಬಮಂಗಲಿಕ್ಕೆ ಸ್ಥಳಾಂತರ ಮಾಡಬೇಕೆನ್ನತಕ್ಕಂಥದ್ದನ್ನು ವಿಚಾರ ಮಾಡುತ್ತಿದ್ದಾರೆ. ಇದರಿಂದ ಇವೊತ್ತು ಉತ್ತರ ಕರ್ನಾಟಕದಲ್ಲಿ 9 ಕೆಎಸ್‌ಆರ್‌ಪಿ ಬಟಾಲಿಯನ್‌ಗಳ ಪೈಕಿ ಕೇವಲ ಎರಡು ಇವೆ. ಆದ್ದರಿಂದ ಮಂಜೂರಾಗಿರುವ ಬಟಾಲಿಯನ್‌ನ್ನು ಬೇರೆ ಕಡೆಗೆ ಸ್ಥಳಾಂತರ ಮಾಡದೇ ಕೂಡಲೇ ಈ ಬಗ್ಗೆ ಕ್ರಮ ತೆಗೆದುಕೊಂಡು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸಿ. ಮಾಣಯ್ಯ : ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಮಂಜೂರಾತಿಯಾಗಿದೆ. ಅದನ್ನು ಬೇರೆ ಕಡೆಗೆ ಸ್ಥಳಾಂತರ ಮಾಡುವ ಪ್ರಯತ್ನ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ ಅದು ಮಂಜೂರಾಗಿರತಕ್ಕಂಥದ್ದು ಇವೆ. ಇದರ ಬಗ್ಗೆ ಇಲ್ಲಿ ಪೋಲೀಸ್ ಅಧಿಕಾರಿಗಳಿದ್ದಾರೆ, ಅವರಿಗೆ ವಿಷಯ ತಿಳಿಸಿ ಸದಸ್ಯರ ಚಿಂತನೆ ಏನಿದೆ ಅದಕ್ಕೆ ಅನುಗುಣವಾಗಿ ನಡೆಯತಕ್ಕಂಥದ್ದಕ್ಕೆ ಸೂಕ್ತ ಕ್ರಮವನ್ನು ನಾವು ಮಾಡುತ್ತೇವೆ.

ಬಿ) ಕರ್ನಾಟಕದಲ್ಲಿ ಹನಿ ನೀರು ಯೋಜನೆಗೆ ಬಾಕಿ ಹಣವನ್ನು ಪಾವತಿ ಮಾಡುವುದು.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಹನಿ ನೀರು ಯೋಜನೆಗೆ ಸುಮಾರು 25ಕೋಟಿ ರೂ.ಗಳ ಪ್ರಸ್ತಾವನೆ ಇದ್ದು ಭಾರತ ಸರ್ಕಾರದವರು ಇದಕ್ಕೆ ನೀತಿ ಇಲ್ಲ ನಾವು ಎಷ್ಟು ಬೇಕಾದರೂ ಕೂಡುತ್ತೇವೆ ಎಂದು ಹೇಳಿದ್ದಾರೆ ಇದಕ್ಕೆ ರಾಜ್ಯ ಸರಕಾರದವರು 10ಪರ್‌ಸೆಂಟ್‌ನಷ್ಟು ಮಾರ್ಚ್ 31ರೊಳಗೆ ಇದಕ್ಕೆ ಕೊಡಬೇಕಾದ ಸಬ್ಸಿಡಿಯನ್ನು ಎಲ್ಲಾ ಕೊಡಬೇಕಾಗುತ್ತದೆ. ನನಗೆ ಇರುವ ಮಾಹಿತಿಗಳ ಪ್ರಕಾರ ಬಹಳ ಅಂದರೆ 8.67 ಕೋಟಿ ಕೋಟ್ಟಿದ್ದಾರೆ. ಮಾರ್ಚ್ 10ರೊಳಗೆ 25ಕೋಟಿ ಇದಕ್ಕೆ ಬೇಡಿಕೆ ಇತ್ತು. ಮಾರ್ಚ್ 10 ರಿಂದ ಈ ಕಡೆಗೆ ಇನ್ನೂ 5-6 ಕೋಟಿಗಳಷ್ಟು ಜಾಸ್ತಿ ಆಗಿರುತ್ತದೆ. ಈ ಸಬ್ಸಿಡಿಯನ್ನು ಕೊಡದೇ ಹೋದರೆ ಮಾರ್ಚ್ 31ರ ನಂತರ ಲ್ಯಾಪ್ಸ್ ಆಗುತ್ತದೆ. ರಾಜ್ಯದಲ್ಲಿನ ರೈತರು ಯಾರು ಡ್ರಿಪ್‌ಇರಿಗೇಷನ್ ಮಾಡಿಸಿದ್ದಾರೆ ಅವರಿಗೆ